ಕರ್ನಾಟಕ ವಿಧಾನ ಸಭೆ

**395**

**ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ)**

**ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು**

ಅ) ಪ್ರಸಕ್ತ ಸಾಲಿನಲ್ಲಿ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳ ನಿರ್ಮಾಣಕ್ಕೆ ಆಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು;

ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ರೂ.5000.00 ಲಕ್ಷಗಳನ್ನು ಒದಗಿಸಲಾಗಿದೆ.

ಆ) ಆ ಪೈಕಿ ಇಲ್ಲಿಯವರೆಗೂ ವಿವಿಧ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುವ ಹಣವೆಷ್ಟು; ಆ ಪೈಕಿ ಇಲ್ಲಿಯವರೆವಿಗೆ ಎಷ್ಟು ಕಟ್ಟಡಗಳನ್ನು ನಿರ್ಮಿಸಲಾಗಿದೆ; ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಸಂಖ್ಯೆ ಎಷ್ಟು;

ಇದುವರೆವಿಗೂ ರೂ.1713.43 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

RIDF XII ರಡಿಯಲ್ಲಿ 666 ಕಟ್ಟಡಗಳನ್ನು ಮತ್ತು SDP ಅಡಿಯಲ್ಲಿ 882 ಕಟ್ಟಡಗಳನ್ನು ನಿರ್ಮಿಸಲು ಕ್ರಮ ತೆಎದುಕೊಳ್ಳಲಾಗಿದೆ. ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಇ) ಈ ಪೈಕಿ ಬೀದರ್ ಜಿಲ್ಲೆಯಲ್ಲಿ ಎಷ್ಟು ಕಟ್ಟಡಗಳನ್ನು ನಿರ್ಮಿಸಲಾಗಿದೆ ಹಾಗೂ ಇಲ್ಲಿ ಇರುವ ಅಂಗನವಾಡಿಗಳ ಸಂಖ್ಯೆ ಎಷ್ಟು (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಬೀದರ್ ಜಿಲ್ಲೆಯಲ್ಲಿ RIDF XII ರಡಿಯಲ್ಲಿ 17 ಕಟ್ಟಡಗಳನ್ನು ಮತ್ತು SDP ಅಡಿಯಲ್ಲಿ 65 ಕಟ್ಟಡಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಬೀದರ್ ಜಿಲ್ಲೆಯಲ್ಲಿ 1580 ಅಂಗನವಾಡಿ ಕೇಂದ್ರಗಳಿದ್ದು, ವಿಧಾನ ಸಭಾ ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ.

| | | |
|---|---|---|
| ಬೀದರ್ ದಕ್ಷಿಣ | – | 338 |
| ಬೀದರ್ | – | 138 |
| ಬಾಲ್ಕಿ | – | 280 |
| ಹುಮ್ನಾಬಾದ್ | – | 255 |
| ಬಸವಕಲ್ಯಾಣ | – | 301 |
| ಔರಾದ್ | – | 268 |

ಈ) ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಅಂಗನವಾಡಿಗಳಿಗೆ ಮೂಲಭೂತ ಸೌಕರ್ಯಗಳ ಕೊರತೆ ಅಂದರೆ ಶೌಚಾಲಯ ನಿರ್ಮಾಣದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಊ) ಹಾಗಿದ್ದಲ್ಲಿ, ಈ ಮತಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಶೌಚಾಲಯಗಳನ್ನು ನಿರ್ಮಿಸುವ ಸಲುವಾಗಿ ಹಣವನ್ನು ಪಾವತಿ ಮಾಡಲಾಗಿದೆ; ಹಣ ಪಾವತಿ ಮಾಡಿದ್ದರೂ ಈ ಗ್ರಾಮಗಳಲ್ಲಿ ಶೌಚಾಲಯಗಳನ್ನು ನಿರ್ಮಿಸದೇ ಇರಲು ಕಾರಣಗಳೇನು: ಯಾವಾಗ ಶೌಚಾಲಯಗಳನ್ನು ನಿರ್ಮಿಸಲಾಗುವುದು (ವಿವರ ನೀಡುವುದು)?

2006–07ನೇ ಸಾಲಿನಲ್ಲಿ ಜಲನಿರ್ಮಲ ಯೋಜನೆಯಡಿಯಲ್ಲಿ 41 ಶೌಚಾಲಯಗಳನ್ನು ನಿರ್ಮಿಸಲು ಪ್ರತಿ ಶೌಚಾಲಯಕ್ಕೆ ರೂ.5000/– ಗಳಂತೆ ವಿತರಿಸಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಇದಲ್ಲದೆ ನಬಾರ್ಡ್ ಅಡಿಯಲ್ಲಿ ನಿರ್ಮಿಸಿರುವ 9 ಕಟ್ಟಡದಲ್ಲಿ ಮತ್ತು ಮಾದರಿ ಅಂಗನವಾಡಿ ಕಟ್ಟಡಗಳಡಿಯಲ್ಲಿ ನಿರ್ಮಿಸಿರುವ 6 ಕಟ್ಟಡದಲ್ಲಿ ಶೌಚಾಲಯ ನಿರ್ಮಿಸಿದ್ದು, ಒಟ್ಟು ಬಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ 56 ಕೇಂದ್ರಗಳಿಗೆ ಶೌಚಾಲಯ ನಿರ್ಮಿಸಲಾಗಿದೆ.

ಗ್ರಾಮವಾರು ವಿವರವನ್ನು ಅನುಬಂಧ–2 ರಲ್ಲಿ ಒದಗಿಸಿದೆ.

ಉಳಿದ ಕೇಂದ್ರಗಳಿಗೆ ಶೌಚಾಲಯವನ್ನು ಹಂತ ಹಂತವಾಗಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಮಮಅ 54 ಐಸಿಡಿ 2009

(ಪಿ.ಎಂ.ನರೇಂದ್ರಸ್ವಾಮಿ)
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು

**ಅನುಬಂಧ–1**

**2008–09 ನೇ ಸಾಲಿನಲ್ಲಿ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಬಿಡುಗಡೆ ಮಾಡಿರುವ ಅನುದಾನದ ವಿವರ (ರೂ ಲಕ್ಷಗಳಲ್ಲಿ)**

| ಕ್ರ ಸಂ | ಜಿಲ್ಲೆಯ ಹೆಸರು | ಬಿಡುಗಡೆ ಮಾಡಿರುವ ಅನುದಾನ ವಿವರ | | |
|---|---|---|---|---|
| | | ಆರ್.ಐ.ಡಿ.ಎಫ್ | ಎಸ್.ಡಿ.ಪಿ | ಒಟ್ಟು |
| 1 | ಬಾಗಲಕೋಟೆ | 21.50550 | 29.00000 | 50.50550 |
| 2 | ಬೆಂಗಳೂರು(ಗ್ರಾ) | 5.13654 | 3.00000 | 8.13654 |
| 3 | ರಾಮನಗರ | 21.33462 | 23.00000 | 44.33462 |
| 4 | ಬೆಂಗಳೂರು(ನ) | 16.12000 | 2.00000 | 18.12000 |
| 5 | ಬಳ್ಳಾರಿ | 26.12594 | 75.00000 | 101.12594 |
| 6 | ಬೆಳಗಾಂ | 33.54748 | 36.00000 | 69.54748 |
| 7 | ಬೀದರ್ | 9.35000 | 75.00000 | 84.35000 |
| 8 | ಬಿಜಾಪುರ | 29.35440 | 49.00000 | 78.35440 |

| | | | | |
|---|---|---|---|---|
| 9 | ಚಾಮರಾಜನಗರ | 24.05330 | 29.00000 | 53.05330 |
| 10 | ಚಿಕ್ಕಮಗಳೂರು | 26.50550 | 11.00000 | 37.50550 |
| 11 | ಚಿತ್ರದುರ್ಗ | 0.00440 | 33.00000 | 33.00440 |
| 12 | ದಾವಣಗೆರೆ | 24.00550 | 39.00000 | 63.00550 |
| 13 | ದಕ್ಷಿಣ ಕನ್ನಡ | 17.64418 | 0.00000 | 17.64418 |
| 14 | ಧಾರವಾಡ | 32.89000 | 14.00000 | 46.89000 |
| 15 | ಗದಗ | 7.42154 | 14.00000 | 21.42154 |
| 16 | ಗುಲ್ಬರ್ಗ | 51.95078 | 118.00000 | 169.95078 |
| 17 | ಹಾಸನ | 114.20590 | 28.00000 | 142.20590 |
| 18 | ಹಾವೇರಿ | 24.30660 | 35.00000 | 59.30660 |
| 19 | ಮಡಿಕೇರಿ | 18.18242 | 0.000000 | 18.182.42 |
| 20 | ಕೋಲಾರ | 16.32374 | 22.00000 | 38.32374 |
| 21 | ಚಿಕ್ಕಬಳ್ಳಾಪುರ | 16.32374 | 33.00000 | 49.32374 |
| 22 | ಕೊಪ್ಪಳ | 13.40330 | 57.00000 | 70.40330 |
| 23 | ಮಂಡ್ಯ | 27.84638 | 39.00000 | 66.84638 |
| 24 | ಮೈಸೂರು | 20.64528 | 44.00000 | 64.64528 |
| 25 | ರಾಯಚೂರು | 21.20440 | 74.00000 | 95.20440 |
| 26 | ಶಿವಮೊಗ್ಗ | 26.50550 | 12.00000 | 38.50550 |
| 27 | ತುಮಕೂರು | 33.60770 | 83.00000 | 116.60770 |
| 28 | ಉಡುಪಿ | 12.72264 | 0.00000 | 12.72264 |
| 29 | ಕಾರವಾರ | 21.20440 | 23.00000 | 44.20440 |
| | ಒಟ್ಟು | 713.43168 | 1000.00000 | 1713.43168 |

**ಅನುಬಂಧ–2**

**ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಶೌಚಾಲಯ ಇರುವ ಗ್ರಾಮಗಳ ಹೆಸರು**

| | | | |
|---|---|---|---|
| 1. | ಹಲಬರ್ಗಾ | 30. | ಆನಂದವಾಡಿ |
| 2. | ಹಾಲಹಳ್ಳಿ | 31. | ಡೋಣಗಾಪುರ |
| 3. | ಹಾಲಹಳ್ಳಿ(ಬಿ) | 32. | ಕಳಸದಾಳ |
| 4. | ಬ್ಯಾಲಹಳ್ಳಿ | 33. | ಶಿಜ್ಜೀಮಳ್ಳ |
| 5. | ಖಾನಪುರ | 34. | ಹಲ್ಸಿತುಗಾಂವ |
| 6. | ಮಳಜಾವುರ | 35. | ಭಾತಂಬ್ರಾ |

| | | | |
|---|---|---|---|
| 7. | ಧನ್ನೂರ | 36. | ಹಲ್ಸಿಎಲೆ |
| 8. | ಧನ್ನೂರ (ಬಿ) | 37. | ವಾಗಲಗಾಂವ |
| 9. | ಕರನಳ್ಳಿ | 38. | ಜಿರಗ್ಗಾಳ |
| 10. | ವರವಟ್ಟಿ(ಎ) | 39. | ಕೋನಮೇಳಕುಂಬಾ |
| 11. | ವರವಟ್ಟಿ(ಬಿ) | 40. | ವನಸಂಗ |
| 12. | ಬಬಾದಿ ಮಾವಿನಹಳ್ಳಿ | 41. | ಬೀರಿ(ಬಿ) |
| 13. | ನಾವಡಗಿ | 42. | ದಾಡಗಿ |
| 14. | ಕಲವಾಡಿ | 43. | ಕೆಸರಜವಳಗಾ(ಎ) |
| 15. | ವರವಟ್ಟಿವಾಡಿ | 44. | ಅಂಬಸಂಗಾವಿ |
| 16. | ಕೊಸಂ | 45. | ಮರೂರ |
| 17. | ನಾಗೂರಕೆ | 46. | ಕರಹ್ಯಾಳ |
| 18. | ಚಂದಾಪುರ | 47. | ಲಂಚಿವಾಡ |
| 19. | ಅಹಮದಬಾದ್ | 48. | ಚಳಕಾಪುರ(ಎ) |
| 20. | ಬೀರಿ(ಕೆ) | 49. | ರಮಠದಪುರವಾಡಿ |
| 21. | ಖ.ಚಿಂಚೋಳಿ (ಎ) | 50. | ಎನಕುರ(ಎ) |
| 22. | ಖ.ಚಿಂಚೋಳಿ (ಬಿ) | 51. | ಅಳಂದಿ |
| 23. | ಗೋರನಾಳ | 52. | ಭಾತಂಬ್ರಾ(ಬಿ) |
| 24. | ಹ.ಚಿಂಚೋಳಿ(ಸಿ) | 53. | ಮೇಹಕರಹಾಂದಾ |
| 25. | ಚಳಕಾಪುರ | 54. | ನಿಟ್ಟೂರ(ಬಿ) |
| 26. | ಇಂಚೂರು | 55. | ಭಾತಾಂಬ್ರಾ (ಇ) |
| 27. | ಲಾಧಾ | 56. | ಹಲ್ಸಿತುಗಾಂವ(ಎ) |
| 28. | ಆತನೂರ | | |
| 29. | ತೆಲಗಾಂವ | | |

**ಕರ್ನಾಟಕ ವಿಧಾನ ಸಭೆ**

**396 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ)**

**ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು**

ಅ) ಅಂಗನವಾಡಿ ಕೇಂದ್ರಗಳಿಗೆ ಪೂರೈಸುತ್ತಿರುವ ಆಹಾರ ಪದಾರ್ಥಗಳು ಕಳಪೆ ದರ್ಜೆಯದಾಗಿರುವ ಬಗ್ಗೆ ಹಲವಾರು ದೂರುಗಳು ಸರ್ಕಾರಕ್ಕೆ ಬಂದಿರುವುದು ನಿಜವೇ (ಬಂದಿರುವ ದೂರುಗಳ ಬಗ್ಗೆ ಜಿಲ್ಲಾವಾರು ವಿವರಗಳನ್ನು ಒದಗಿಸುವುದು);